ಕರ್ನಾಟಕ ಸರ್ಕಾರ

ಮೀನುಗಾರಿಕೆ ನಿರ್ದೇಶನಾಲಯ

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560 001

ದೂ : 080 -2286 4681/2286 4604,ಇಮೇಲ್ : dfkarnataka@rediffmail.com

---

ಸಂಖ್ಯೆ: DOF-TECH0BRS/13/2022-E- 716189 ದಿನಾಂಕ: 19-08-2023

## ಮೀನುಮರಿ ಸರಬರಾಜಿಗೆ ಆಸಕ್ತಿ ವ್ಯಕ್ತಪಡಿಸುವಿಕೆ

2023-24 ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ರಾಜ್ಯದ ವಿವಿಧ ನದಿ ಭಾಗಗಳಿಗೆ ಅಂದಾಜು 80.00 ಲಕ್ಷ ಸಂಖ್ಯೆಯ 80-100 ಮೀ.ಮೀ. ಗಾತ್ರದ ಬಲಿತ ಬಿತ್ತನೆ ಮೀನುಮರಿಗಳನ್ನು ಸರ್ಕಾರ ನಿಗದಿಪಡಿಸಿರುವ ದರಗಳಲ್ಲಿ (ಸಾಗಾಣಿಕೆ ವೆಚ್ಚ ಸೇರಿ) ಅನುದಾನ ಲಭ್ಯತೆಗನುಗುಣವಾಗಿ ಸರಬರಾಜು ಮಾಡಲು ಮೀನುಗಾರಿಕೆ ಇಲಾಖೆಯಲ್ಲಿ ನೊಂದಾಯಿಸಿರುವ ಆಸಕ್ತ ಮೀನುಮರಿ ಪಾಲನೆದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ಸ್ಪಾನ್ ಮೀನುಮರಿಗಳನ್ನು ಸರ್ಕಾರಿ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ಕಡ್ಡಾಯವಾಗಿ ಖರೀದಿಸಿ ಪಾಲನೆ ಮಾಡಿರತಕ್ಕದ್ದು.**

<table>
<tr><th>ಕ್ರಸಂ</th><th>ಬಲಿತ ಬಿತ್ತನೆ ಮೀನುಮರಿ ತಳಿಗಳು</th><th>ದರ ಪ್ರತಿ ಮೀನುಮರಿಗೆ (ರೂಗಳಲ್ಲಿ)</th><td rowspan="5">ನಿಗದಿತ ಅರ್ಜಿ ಮತ್ತು ಷರತ್ತು ನಿಬಂಧನೆಗಳ ನಮೂನೆಗಳನ್ನು ಮೀನುಗಾರಿಕೆ ನಿರ್ದೇಶನಾಲಯದಲ್ಲಿ ಅಥವಾ ಇಲಾಖೆಯ ವಲಯ/ಜಿಲ್ಲಾ/ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಹಾಗೂ ಅಂತರ್ಜಾಲ www.fisheries.karnataka.gov.in ನಲ್ಲಿ ದಿ :23-08-2023 ರಿಂದ ಪಡೆಯಬಹುದು.</td></tr>
<tr><td>1</td><td>ಕಟ್ಲಾ</td><td>1.50</td></tr>
<tr><td>2</td><td>ರೋಹು</td><td>1.20</td></tr>
<tr><td>3</td><td>ಮೃಗಾಲ್</td><td>1.20</td></tr>
<tr><td>4</td><td>ಸಾಮಾನ್ಯ ಗೆಂಡೆ</td><td>1.20</td></tr>
</table>

ಅರ್ಜಿ ನಮೂನೆ ಸಲ್ಲಿಸಲು ಕಡೆಯ ದಿನಾಂಕ:**12-09-2023** ಸಂಜೆ **5.30** ಗಂಟೆ, ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

**ಅರ್ಜಿ ಸಲ್ಲಿಸಬೇಕಾದ ವಿಳಾಸ** : ಸಂಬಂಧಿಸಿದ ತಾಲ್ಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ

ತಮ್ಮ ವಿಶ್ವಾಸಿ

ಮೀನುಗಾರಿಕೆ ನಿರ್ದೇಶಕರು

| ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ |
|---|
| |

ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಯಡಿ 2023-24 ನೇ ಸಾಲಿನಲ್ಲಿ ರಾಜ್ಯದ ವಿವಿಧ ನದಿ ಭಾಗಗಳಿಗೆ ರಾಜ್ಯದ ನೊಂದಾಯಿತ ಖಾಸಗಿ ಮೀನು ಕೃಷಿಕರಿಂದ ಬಲಿತ ಬಿತ್ತನೆ ಮೀನುಮರಿ ಸರಬರಾಜು ಮಾಡಲು ಆಸಕ್ತಿ ವ್ಯಕ್ತಪಡಿಸಲು

**ಸಲ್ಲಿಸಬೇಕಾದ - ಅರ್ಜಿ ನಮೂನೆ**

| | | | |
|---|---|---|---|
| 1 | ಹೆಸರು | | |
| 2 | ಸಂಪರ್ಕ ವಿಳಾಸ | | |
| 3 | ಮೊಬೈಲ್ ಸಂಖ್ಯೆ | | |
| 4 | ಜಾತಿ (ಪರಿಶಿಷ್ಟ ಪಂಗಡ/ಪರಿಶಿಷ್ಟ ಜಾತಿಗೆ ಸೇರಿದ್ದಲ್ಲಿ ಪ್ರಮಾಣ ಪತ್ರ ಲಗತ್ತಿಸುವುದು) | | |
| 5 | ಮೀನುಮರಿ ಪಾಲನಾ ಕೇಂದ್ರದ ಹೆಸರು ಮತ್ತು ವಿಳಾಸ | | |
| 6 | ಕೇಂದ್ರದ ನೊಂದಣಿ ಸಂಖ್ಯೆ/ದಿನಾಂಕ / (ಪ್ರತಿ ಲಗತ್ತಿಸುವುದು) | | |
| 7 | ಕೇಂದ್ರದ ನೊಂದಣಿ ನವೀಕರಣ ಸಂಖ್ಯೆ/ದಿನಾಂಕ/ಪ್ರತಿ ಲಗತ್ತಿಸುವುದು | | |
| 8 | ಪಾಲನಾ ಕೇಂದ್ರದ ಜಲ ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | | |
| 9 | ಪಾಲನಾ ಕೇಂದ್ರದಿಂದ ಸರಬರಾಜು ಮಾಡಲು ಸಾಧ್ಯವಿರುವ ಬಲಿತ ಬಿತ್ತನೆ ಮೀನುಮರಿಗಳ ಸಂಖ್ಯೆ (ಸಂಖ್ಯೆ ಲಕ್ಷಗಳಲ್ಲಿ) | ಬಲಿತ ಬಿತ್ತನೆ ಮೀನುಮರಿ ತಳಿಗಳು | ಸಂಖ್ಯೆ (ಲಕ್ಷಗಳಲ್ಲಿ |
| | | 1. ಕಟ್ಲ | |
| | | 2. ರೋಹು | |
| | | 3. ಮೃಗಾಲ್ | |
| | | 4. ಸಾಮಾನ್ಯ ಗೆಂಡೆ | |
| | | ಒಟ್ಟು | |

| | | |
|---|---|---|
| 10 | ಬ್ಯಾಂಕ್ ಖಾತೆ ವಿವರ<br>(ಪಾಸ್ ಪುಸ್ತಕದ ಪ್ರತಿ ಲಗತ್ತಿಸುವುದು) | |

ಮೇಲೆ ನೀಡಿರುವ ಮಾಹಿತಿಯು ನಿಜವೆಂದು ಪ್ರಮಾಣೀಕರಿಸುತ್ತೇನೆ ಹಾಗೂ ಇಲಾಖೆಯ ನಿಯಮ ಮತ್ತು ನಿಬಂಧನೆಗಳಿಗೆ ಒಪ್ಪಿ ರೂ:100/-ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡಿದ್ದೇನೆ.

ಸ್ಥಳ: ಸರಬರಾಜುದಾರರ ಸಹಿ

ದಿನಾಂಕ:ಬೆಂಗಳೂರು

ರಾಜ್ಯದ ವಿವಿಧ ನದಿ ಭಾಗಗಳಿಗೆ ಬಲಿತ ಬಿತ್ತನೆ ಮೀನುಮರಿಗಳನ್ನು ಇಲಾಖೆಯಲ್ಲಿ ನೊಂದಾಯಿಸಿರುವ ಖಾಸಗಿ ಮೀನು ಕೃಷಿಕರಿಂದ ಖರೀದಿಸುವ ಬಗ್ಗೆ ಮುಚ್ಚಳಿಕೆ ಪತ್ರ:

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಪಸಂಮೀ:ಇ-135:ಮೀಇಯೋ:2019 ದಿ:21.10.2020 ರಲ್ಲಿ ವಿವಿಧ ತಳಿಗಳ ಬಲಿತ ಬಿತ್ತನೆ ಮೀನುಮರಿಗಳಿಗೆ ನಿಗದಿಪಡಿಸಿರುವ ದರಗಳನ್ವಯ ಬಲಿತ ಬಿತ್ತನೆ ಮೀನುಮರಿಗಳನ್ನು ಸಾಗಾಣಿಕೆ ವೆಚ್ಚ ಸೇರಿದಂತೆ ಸರಬರಾಜು ಮಾಡಲು ನನ್ನ / ನಮ್ಮ ಒಪ್ಪಿಗೆ ಇರುತ್ತದೆ.

2. ಸರ್ಕಾರದ ಅಧಿಸೂಚನೆ ಸಂಖ್ಯೆ: ಪಸಂಮೀ:04:ಮೀಇಇ:2010 ದಿ:03.02.2010 ರಂತೆ ಹಾಗೂ ನಿರ್ದೇಶನಾಲಯದ ಪತ್ರ ಸಂಖ್ಯೆ: ಮೀನಿ:05:ಐಎನ್‌ಎಲ್/2014; ದಿ:20.03.2015 ರ ನೀತಿ ನಿಯಮಗಳನ್ವಯ ನನ್ನ ಕೇಂದ್ರವನ್ನು ಸಂಬಂಧಿಸಿದ ವಲಯದ ಮೀನುಗಾರಿಕೆ ಜಂಟಿನಿರ್ದೇಶಕ ರವರ ಕಛೇರಿಯಲ್ಲಿ ನೊಂದಾಯಿಸಿ/ ನವೀಕರಣ ಮಾಡಿಕೊಂಡಿರುತ್ತೇನೆ. ಒಂದು ವೇಳೆ ಈ ರೀತಿ ನೊಂದಣಿ / ನವೀಕರಣವಾಗದೆ ಇದ್ದಲ್ಲಿ ನನ್ನ ಅರ್ಹತೆಯನ್ನು ರದ್ದುಪಡಿಸಲು ನನ್ನ ಒಪ್ಪಿಗೆಯಿರುತ್ತದೆ.

3. ನಾನು ಸರಬರಾಜು ಮಾಡಲು ಉದ್ದೇಶಿಸಿರುವ ಮೀನುಮರಿಗಳನ್ನು ನನ್ನ ನೊಂದಾಯಿತ ಮೀನುಮರಿ ಪಾಲನಾ ಕೇಂದ್ರದಲ್ಲಿಯೇ ಪಾಲನೆ ಮಾಡುತ್ತೇನೆ.

4. ಸ್ಪಾನ್ ಮೀನುಮರಿಗಳನ್ನು ಸರ್ಕಾರಿ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ಮಾತ್ರ ಕಡ್ಡಾಯವಾಗಿ ಖರೀದಿಸಿ ಪಾಲನೆ ಮಾಡಲು ನನ್ನ ಒಪ್ಪಿಗೆಯಿರುತ್ತದೆ.

5. ಸ್ಪಾನ್ ಮೀನುಮರಿಗಳನ್ನು ಪಾಲನೆ ಮಾಡಿದ ನಂತರ ಲಭ್ಯವಾಗುವ ಬಲಿತ ಬಿತ್ತನೆ ಮೀನುಮರಿಗಳ ವಿವರವನ್ನು ಮೂಲ ಬಿಲ್ಲಿನೊಂದಿಗೆ ಸ್ಥಳೀಯ ಅಧಿಕಾರಿಗೆ ಸಲ್ಲಿಸುತ್ತೇನೆ.

6. ಹುಲ್ಲುಗೆಂಡೆ, ಬೆಳ್ಳಿಗೆಂಡೆ, ಕೆಮ್ಮೀನು ಮೀನುಮರಿಗಳನ್ನು ಇಲಾಖೆ ಕೆರೆಗಳಿಗೆ ,ಗ್ರಾಮ ಪಂಚಾಯಿತಿ ಕೆರೆಗಳಿಗೆ, ಜಲಾಶಯಗಳಿಗೆ ದಾಸ್ತಾನಿಗೆ ಪರಿಗಣಿಸುವುದಿಲ್ಲವೆಂಬ ಷರತ್ತಿಗೆ ನನ್ನ ಒಪ್ಪಿಗೆ ಇದೆ.

7. ಇಲಾಖೆಯು ನಿರ್ಧರಿಸಿ ಆದೇಶಿಸುವಂತೆ ನನ್ನ ಬಳಿ ಲಭ್ಯವಿರುವ ಯಾವುದೇ ತಳಿಯನ್ನಾಗಲೀ (ಹುಲ್ಲುಗೆಂಡೆ, ಬೆಳ್ಳಿಗೆಂಡೆ, ಕೆಮ್ಮೀನು ಹೊರದುಪಡಿಸಿ) ಮೇಲಿನ ಕಂಡಿಕೆ 1 ರಲ್ಲಿ ತಿಳಿಸಿರುವಂತೆ ಸರ್ಕಾರ ನಿಗದಿಪಡಿಸಿರುವ ದರದಲ್ಲಿ (ಸಾಗಾಣಿಕೆ ವೆಚ್ಚ ಸೇರಿದಂತೆ) ರಾಜ್ಯದ ಯಾವುದೇ ಸ್ಥಳಗಳಿಗೆ ಬಲಿತ ಬಿತ್ತನೆ ಮೀನುಮರಿಗಳನ್ನು ಸರಬರಾಜು ಮಾಡಲು ನಾನು ಸಿದ್ದನಿದ್ದೇನೆ. ಇಲಾಖೆಯ ಲಭ್ಯವಿರುವ ಅನುದಾನದಲ್ಲಿ ಮಾತ್ರ ಸರಬರಾಜು ಮಾಡಲು ನಾನು ಸಿದ್ದನಿದ್ದೇನೆ.

8. ವಿವಿಧ ಜಲಸಂಪನ್ಮೂಲಗಳಿಗೆ ವಿವಿಧ ಯೋಜನೆಗಳಡಿ ದಾಸ್ತಾನು ಮಾಡಲು ಉದ್ದೇಶಿಸಿರುವ ಬಲಿತ ಮೀನುಮರಿಗಳನ್ನು ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ನೊಂದಾಯಿತ ಕೇಂದ್ರಗಳ ಸರಬರಾಜು ಸಾಮರ್ಥ್ಯಕ್ಕನುಗುಣವಾಗಿ ಹಾಗೂ ಎಲ್ಲಾ ನೊಂದಾಯಿತ ಕೇಂದ್ರಗಳಲ್ಲಿ ಲಭ್ಯವಿರುವ ವಿವಿಧ ತಳಿಗಳ ಮೀನುಮರಿಗಳ ಸಂಖ್ಯೆಯನ್ನು ಪರಿಗಣಿಸಿ ಇಲಾಖೆಯು ನಿಗದಿಪಡಿಸಿ ನೀಡುವ ಸರಬರಾಜು ಆದೇಶಗಳಿಗೆ ನನ್ನ ಒಪ್ಪಿಗೆಯಿರುತ್ತದೆ. ಈ ವಿಷಯದಲ್ಲಿ ಮೀನುಗಾರಿಕೆ ನಿರ್ದೇಶಕರ ತೀರ್ಮಾನವು ಅಂತಿಮವಾಗಿರುತ್ತದೆ.

9. ಮೀನುಮರಿ ಬಿತ್ತನೆ ಆದೇಶದೊಂದಿಗೆ ಇಲಾಖೆಯು ನಿಗದಿಪಡಿಸುವ ಸರಬರಾಜು ವಿಧಿ-ವಿಧಾನಗಳು ಹಾಗೂ ನಿಯಮಗಳಿಗೆ ನಾನು ಬದ್ದನಾಗಿರುತ್ತೇನೆ.

10. ಒಂದು ವೇಳೆ ಅರ್ಜಿಯಲ್ಲಿ ನಾನು ತಪ್ಪು ಮಾಹಿತಿ ನೀಡಿರುವುದು ಯಾವುದೇ ಸಂಧರ್ಭದಲ್ಲಿ ಕಂಡುಬಂದಲ್ಲಿ ನನ್ನ ಅರ್ಹತೆಯನ್ನು ರದ್ದುಪಡಿಸಬಹುದು ಹಾಗೂ ನನ್ನ ಕೇಂದ್ರದ ನೊಂದಣಿಯನ್ನು ರದ್ದುಪಡಿಸಬಹುದಾಗಿದೆ.

11. ಸಾರ್ವಜನಿಕ ಹಿತದೃಷ್ಟಿಯಿಂದ ವಿಶೇಷ ಕಾರಣಗಳಿಂದಾಗಿ ಮೀನುಮರಿಗಳನ್ನು ದಾಸ್ತಾನು ಮಾಡುವ ಕಾರ್ಯಕ್ರಮವನ್ನು ರದ್ದುಪಡಿಸುವ ಪ್ರಮೇಯ ಬಂದಲ್ಲಿ ಮೀನುಗಾರಿಕೆ ಇಲಾಖೆ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತದೆಯೆಂದು ನನಗೆ ಮನವರಿಕೆಯಾಗಿರುತ್ತದೆ.

12. ಮೇಲಿನ ಷರತ್ತುಗಳಿಗೆ ಒಪ್ಪಿ ರೂ:100/- ರ ಛಾಪಾ ಕಾಗದದಲ್ಲಿ ಈ ಮುಚ್ಚಳಿಕೆಯನ್ನು ನೀಡುತ್ತಿದ್ದೇನೆ.

ದಿನಾಂಕ:

ಸ್ಥಳ:ಬೆಂಗಳೂರು

ಅರ್ಜಿದಾರನ ಸಹಿ ಮತ್ತು ವಿಳಾಸ

## ನಮೂನೆ

| ಕ್ರಸಂ | ಮೀನುಮರಿ ಸರಬರಾಜುದಾರರ ಹೆಸರು ಮತ್ತು ವಿಳಾಸ | ತಾಲ್ಲೂಕು | ಜಿಲ್ಲೆ | ಮೀನುಮರಿ ಪಾಲನಾ ಕೇಂದ್ರದ ಹೆಸರು | ಮೊಬೈಲ್ ಸಂಖ್ಯೆ | ಪಾಲನಾ ಕೇಂದ್ರದ ಜಲ ವಿಸ್ತೀರ್ಣ (ಹೆ) | ಸರಬರಾಜು ಮಾಡಲು ಸಾಧ್ಯವಿರುವ ಬಲಿತ ಬಿತ್ತನೆ ಮೀನುಮರಿಗಳ ಸಂಖ್ಯೆ(ಲಕ್ಷಗಳಲ್ಲಿ) | | | | |
|---|---|---|---|---|---|---|---|---|---|---|---|
| | | | | | | | ಕಾಟ್ಲ | ರೋಹು | ಮೃಗಾಲ್ | ಸಾಮಾನ್ಯ ಗೆಂಡೆ | ಒಟ್ಟು |

11.ಸಾರ್ವಜನಿಕ ಹಿತದೃಷ್ಟಿಯಿಂದ ವಿಶೇಷ ಕಾರಣಗಳಿಂದಾಗಿ ಮೀನುಮರಿಗಳನ್ನು ದಾಸ್ತಾನು ಮಾಡುವ ಕಾರ್ಯಕ್ರಮವನ್ನು ರದ್ದುಪಡಿಸುವ ಪ್ರಮೇಯ ಬಂದಲ್ಲಿ ಮೀನುಗಾರಿಕೆ ಇಲಾಖೆ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತದೆಯೆಂದು ನನಗೆ ಮನವರಿಕೆಯಾಗಿರುತ್ತದೆ.

12.ಮೇಲಿನ ಷರತ್ತುಗಳಿಗೆ ಒಪ್ಪಿ ರೂ:100/- ರ ಛಾಪಾ ಕಾಗದದಲ್ಲಿ ಈ ಮುಚ್ಚಳಿಕೆಯನ್ನು ನೀಡುತ್ತಿದ್ದೇನೆ.

ದಿನಾಂಕ:

ಸ್ಥಳ:ಬೆಂಗಳೂರು

ಅರ್ಜಿದಾರನ ಸಹಿ ಮತ್ತು ವಿಳಾಸ

## ನಮೂನೆ

| ಕ್ರಸಂ | ಮೀನುಮರಿ ಸರಬರಾಜುದಾರರ ಹೆಸರು ಮತ್ತು ವಿಳಾಸ | ತಾಲ್ಲೂಕು | ಜಿಲ್ಲೆ | ಮೀನುಮರಿ ಪಾಲನಾ ಕೇಂದ್ರದ ಹೆಸರು | ಮೊಬೈಲ್ ಸಂಖ್ಯೆ | ಪಾಲನಾ ಕೇಂದ್ರದ ಜಲ ವಿಸ್ತೀರ್ಣ (ಹೆ) | ಸರಬರಾಜು ಮಾಡಲು ಸಾಧ್ಯವಿರುವ ಬಲಿತ ಬಿತ್ತನೆ ಮೀನುಮರಿಗಳ ಸಂಖ್ಯೆ(ಲಕ್ಷಗಳಲ್ಲಿ) | | | | |
|---|---|---|---|---|---|---|---|---|---|---|---|
| | | | | | | | ಕಾಟ್ಲ | ರೋಹು | ಮೃಗಾಲ್ | ಸಾಮಾನ್ಯ ಗೆಂಡೆ | ಒಟ್ಟು |